# ಯುವರಾಜನಿಗೆ ವಯಸ್ಸಾಯ್ತು



ಯುವರಾಜ್ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. '37 ವರ್ಷ, ನಿವೃತ್ತಿಯ ವಯಸ್ಸು ಹೌದೇ' ಎನ್ನುವ ಬಗ್ಗೆ ಈಗಲೂ ಚರ್ಚೆ ಸಾಧ್ಯ. ಏಕೆಂದರೆ 38ರ ಹರೆಯದ ಧೋನಿ ಈಗ ವಿಶ್ವಕಪ್‌ನಲ್ಲಿ ಆಡುತ್ತಿದ್ದಾರೆ. ಧೋನಿಯಂತೆ ಆಟದ ಫಾರ್ಮ್‌ಅನ್ನು ಸ್ಥಿರವಾಗಿ ಉಳಿಸಿಕೊಳ್ಳಲು ಯುವರಾಜ್‌ಗೆ ಸಾಧ್ಯವಾಗಲಿಲ್ಲ. 2019ರ ವಿಶ್ವಕಪ್‌ನಲ್ಲಿ ಯುವರಾಜ್ ಆಡುವುದಿಲ್ಲ ಎನ್ನುವುದು 2017ರ ಹೊತ್ತಿಗೇ ಖಚಿತವಾಗಿತ್ತು. ಆಗ ದೈಹಿಕ ಕ್ಷಮತೆಯನ್ನು ಸಾಬೀತುಪಡಿಸುವ 'ಯೊಯೊ ಟೆಸ್ಟ್'ನಲ್ಲಿ ಯುವರಾಜ್ ಉತ್ತೀರ್ಣರಾಗಲಿಲ್ಲ. 'ಯೊಯೊ ಟೆಸ್ಟ್‌ನಲ್ಲಿ ಪಾಸಾಗದಿದ್ದರೆ ವಿದಾಯ ಪಂದ್ಯ ಏರ್ಪಡಿಸುತ್ತೇವೆಂದು ಆಯ್ಕೆ ಸಮಿತಿಯವರು ಹೇಳಿದರು. ಪಾಸಾಗದಿದ್ದರೆ ನಾನೇ ಹೊರನಡೆಯುತ್ತೇನೆ ಎಂದಿದ್ದೆ. ನಾನು ಕೆಲವು ವಾರಗಳ ಬಳಿಕ ಯೊಯೊ ಟೆಸ್ಟ್‌ನಲ್ಲಿ ಪಾಸಾದೆ. ಆದರೆ ಅವರು ನನ್ನನ್ನು ಮರಳಿ ಕರೆಯಲೇ ಇಲ್ಲ' ಎಂದು ವಿದಾಯದ ಪತ್ರಿಕಾಗೋಷ್ಠಿಯಲ್ಲಿ ಯುವರಾಜ್ ಹೇಳಿದ್ದಾರೆ. ಅಂದರೆ, ಯುವರಾಜ್ ಸಂತೃಪ್ತಿಯಿಂದ ವಿದಾಯ ಪ್ರಕಟಿಸಿಲ್ಲ. 'ನನಗೂ ಹೇಳಲಿಕ್ಕಿದೆ. ಆದರೆ ಈಗ ಹೇಳುವುದಿಲ್ಲ. ಏಕೆಂದರೆ ಭಾರತ ತಂಡ ಇಂಗ್ಲೆಂಡಿನಲ್ಲಿ ವಿಶ್ವಕಪ್ ಪಂದ್ಯವನ್ನು ಆಡುತ್ತಿದೆ. ಈಗ ಯಾವುದೇ ವಿವಾದ ಆಗುವುದು ನನಗಿಷ್ಟವಿಲ್ಲ. ಎಲ್ಲವನ್ನೂ ಮಾತನಾಡಲು ನನಗೂ ಒಂದು ಸರದಿ ಬರುತ್ತದೆ' ಎನ್ನುವುದು ಯುವರಾಜ್ ನುಡಿ. ಪರೋಕ್ಷವಾಗಿ ಯುವರಾಜ್ ಬೊಟ್ಟು ಮಾಡಿದ್ದು ಭಾರತದ ಕೋಚ್ ರವಿಶಾಸ್ತ್ರಿ ಕಡೆಗೆ.

ವಿದಾಯದ ಹೊತ್ತಿನ ಕಹಿ ಮಾತುಗಳೇನೇ ಇರಲಿ, ಯುವಿ ಭಾರತ ಕಂಡ ಅತ್ಯಂತ ವರ್ಣರಂಜಿತ ಆಟಗಾರ. 60ರ ದಶಕದ ಉತ್ತರಾರ್ಧದಲ್ಲಿ ಮನ್ಸೂರ್ ಅಲಿ ಖಾನ್ ಪಟೌಡಿಯ ಕುರಿತು ಚರ್ಚೆ ನಡೆದಂತೆಯೇ, ಕ್ರಿಕೆಟ್ ಸ್ಟೇಡಿಯಂನ ಹೊರಗೆ ಯುವಿ ಬಗ್ಗೆಯೂ ಚರ್ಚೆ ನಡೆಯುತ್ತಿತ್ತು. ಬಾಲಿವುಡ್ ಪಾರ್ಟಿಗಳಲ್ಲಿ ಸದಾ ಮಿಂಚುತ್ತಿದ್ದ ಯುವರಾಜ್, ಸಿನಿಮಾ ನಟಿಯರ ಕಣ್ಮಣಿ ಆಗಿದ್ದು ಸುಳ್ಳಲ್ಲ. ಭಾರತ ಕ್ರಿಕೆಟ್ ತಂಡದ ಅತ್ಯಂತ ಕಿರಿಯ ವಯಸ್ಸಿನ ನಾಯಕ ಟೈಗರ್ ಪಟೌಡಿ ಮತ್ತು ಬಾಲಿವುಡ್‌ನಲ್ಲಿ ಮೊತ್ತಮೊದಲ ಬಾರಿಗೆ ಬಿಕಿನಿ ಧರಿಸಿ ನಟಿಸಿದ ಶರ್ಮಿಳಾ ಠಾಗೋರ್ ನಡುವಣ ಮೊಹಬ್ಬತ್ ಮದುವೆಯಲ್ಲಿ ಮುಕ್ತಾಯ ಕಂಡಿತ್ತು. ಆದರೆ ಯುವರಾಜ್‌ನದ್ದು ಸ್ವಲ್ಪ ಭಿನ್ನ ಕಥೆ. ಹಲವು ನಟಿಯರ ಜೊತೆಗೆ ಆತನ ಹೆಸರು ಜೋರಾಗಿ ಕೇಳಿಬಂದರೂ ಅದು ಹಸೆಮಣೆಯವರೆಗೆ ತಲುಪಲಿಲ್ಲ. ಪ್ರೀತಿ ಜಿಂಗಿಯಾನಿ, ಮಿನಿಷಾ ಲಂಬಾ, ಶಮಿತಾ ಶೆಟ್ಟಿ, ರಿಯಾ ಸೇನ್, ದೀಪಿಕಾ ಪಡುಕೋಣೆ, ಪ್ರೀತಿ ಜಿಂಟಾ– ಹೀಗೆ ಹಲವರ ಜೊತೆಗೆ ಯುವಿಯ ಪ್ರೇಮಸಲ್ಲಾಪ ನಡೆದಿದೆಯೆಂದು ಬಲವಾದ ಸುದ್ದಿ ಹಬ್ಬಿತ್ತು. ಇವರಲ್ಲಿ ಪ್ರೀತಿ ಜಿಂಟಾ ಮಾತ್ರ ಖಡಕ್ ಮಾತುಗಳಲ್ಲಿ ಯಾವ ಸಂಬಂಧವೂ ಇಲ್ಲ ಎಂದು ನಿರಾಕರಿಸಿದ್ದರು. ಕಿಮ್ ಶರ್ಮಾ ಮತ್ತು ಯುವಿ ಮದುವೆ ನಡೆದೇಹೋಯಿತು ಎನ್ನಲಾಯಿತು. ಟೀವಿ ಸಂದರ್ಶನವೊಂದರಲ್ಲಿ ವರದಿಗಾರ್ತಿಯೊಬ್ಬಳು 'ನೀವು ಸಾಕಷ್ಟು ಹುಡುಗಿಯರ ಜೊತೆಗೆ ಫ್ಲರ್ಟ್ ಮಾಡುತ್ತಿದ್ದೀರಂತಲ್ಲ..?' ಎಂದು ಪ್ರಶ್ನಿಸಿದಾಗ ಯುವರಾಜ್ 'ಇವತ್ತು ರಾತ್ರಿ ನೀವು ಫ್ರೀ ಇದ್ದೀರಾ?' ಎಂದು ಮರುಪ್ರಶ್ನೆ ಹಾಕಿದ್ದನ್ನು ಕೇಳಿ ಆ ವರದಿಗಾರ್ತಿ ಹೌಹಾರಿ ಎದ್ದು ಹೋಗಿದ್ದಳು! ಕೊನೆಗೂ ಯುವಿ ಮದುವೆಯಾದದ್ದು ಹಜೆಲ್ ಕೀಚ್ ಎಂಬ ಬಾಲಿವುಡ್ ನಟಿಯನ್ನೇ.

ಈ ಹಿಂದಿನ ಎರಡು ವಿಶ್ವಕಪ್ ಟೂರ್ನಿಗಳಲ್ಲಿ ಭಾಗವಹಿಸಿರುವ ಯುವಿ, ಪ್ರತಿಸಲ ಕ್ರೀಸಿಗೆ ಬಂದಾಗಲೂ ಅಭಿಮಾನಿಗಳ ಎದೆಬಡಿತ ಹೆಚ್ಚಾಗುತ್ತಿತ್ತು. ಲೀಲಾಜಾಲವಾಗಿ ಹೆಚ್ಚು ಶ್ರಮವೇ ಇಲ್ಲದೆ ಸಿಕ್ಸರ್‌ಗಳನ್ನು ಎತ್ತುವ ವಿಶಿಷ್ಟ ಶೈಲಿಯೊಂದು ಯುವಿಗೆ ಕರಗತವಾಗಿತ್ತು. 2007ರ ಟಿ20 ವಿಶ್ವಕಪ್ ಟೂರ್ನಿಯ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ, ಒಂದು ಓವರ್‌ನ ಆರೂ ಎಸೆತಗಳಲ್ಲಿ ಆರು ಸಿಕ್ಸರ್‌ಗಳನ್ನು ಹೊಡೆದದ್ದನ್ನು ಕ್ರಿಕೆಟ್ ಅಭಿಮಾನಿಗಳು ಹೇಗೆ ಮರೆಯಲು ಸಾಧ್ಯ? ಕೇವಲ 12 ಎಸೆತಗಳಲ್ಲಿ 50 ರನ್ ದಾಟಿದ ಆ ಮ್ಯಾಜಿಕ್ ಇನಿಂಗ್ಸ್ ಇವತ್ತಿಗೂ ಕ್ರಿಕೆಟ್‌ಪ್ರಿಯರ ಕಣ್ಣಬೊಂಬೆಗಳಲ್ಲಿ ಸ್ಥಿರವಾಗಿದೆ. ಆ ಸಲ ಟಿ20 ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಯುವಿ, ನಾಲ್ಕು ವರ್ಷಗಳ ಬಳಿಕ ಐವತ್ತು ಓವರ್‌ಗಳ ವಿಶ್ವಕಪ್ ಟೂರ್ನಿಯಲ್ಲೂ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದು ಮಿಂಚಿದ್ದರು. ಈ ವರ್ಷದ ಐಪಿಎಲ್ ಟೂರ್ನಿಯಲ್ಲೂ ಹೆಚ್ಚು ಪಂದ್ಯಗಳಲ್ಲಿ ಯುವಿಗೆ ಆಡಲು ಆಗಿಲ್ಲ. ಹಾಗಾಗಿ ಕ್ರಿಕೆಟ್‌ನ ಮೂರೂ ಸ್ವರೂಪದ ಆಟಗಳಿಗೆ ವಿದಾಯ ಹೇಳಿದ್ದಾರೆ. ಬಹುಶಃ ಇನ್ನೊಂದು ವರ್ಷ ಬೇರೆ ದೇಶಗಳ ಪ್ರೀಮಿಯರ್ ಲೀಗ್‌ಗಳಲ್ಲಿ ಯುವಿ ಆಟವಾಡಬಹುದು.

ಒಟ್ಟು 300ಕ್ಕೂ ಹೆಚ್ಚು ಒಂದು ದಿನದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ್ದು ಸಣ್ಣ ಸಾಧನೆಯೇನಲ್ಲ– ಅದೂ ಶ್ವಾಸಕೋಶದ ಕ್ಯಾನ್ಸರ್ ಎಂಬ ಮಹಾಮಾರಿಯ ವಿರುದ್ಧ ಸೆಣಸುತ್ತಲೇ!

ಚಂಡೀಗಢದ ಯುವಿ ಚಿಕ್ಕಂದಿನಿಂದಲೇ ತುಂಟ ಮತ್ತು ಹಠಮಾರಿ. ಕಷ್ಟಪಟ್ಟು ಎಸ್ಸೆಸೆಲ್ಸಿ ಪಾಸಾಗಿದ್ದಷ್ಟೇ ಶೈಕ್ಷಣಿಕ ಸಾಧನೆ. ತಾರುಣ್ಯಕ್ಕೆ ಮುಂಚೆಯೇ ಅಪ್ಪ– ಅಮ್ಮ ಬೇರೆಯಾದರು. ಅಮ್ಮನ ಮಡಿಲಲ್ಲಿ ಬೆಳೆದ ಯುವಿ, ನವಜ್ಯೋತ್ ಸಿಂಗ್ ಸಿಧು ಬಳಿ ಕ್ರಿಕೆಟ್ ಕಲಿಯಲು ಹೋಗುತ್ತಿದ್ದ. ಆದರೆ ಈತನಿಗೆ ಕ್ರಿಕೆಟ್ ಕಲಿಸಲು ಸಾಧ್ಯವಿಲ್ಲ ಎಂದು ಸಿಧು ಕೈಚೆಲ್ಲಿದ ಬಳಿಕ, ಅಪ್ಪ ಯೋಗರಾಜ್ ಸಿಂಗ್ ಸ್ವತಃ ಕೋಚ್ ಆದರು. ಯೋಗರಾಜ್ ಭಾರತ ತಂಡದ ಮಾಜಿ ವೇಗದ ಬೌಲರ್ ಮತ್ತು ಪಂಜಾಬಿ ಸಿನಿಮಾ ಹೀರೊ. ಮೊತ್ತಮೊದಲ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡಿದಾಗ ಸಿಕ್ಕಿದ 21 ಲಕ್ಷ ರೂಪಾಯಿಯ ಚೆಕ್‌ಅನ್ನು ನೇರವಾಗಿ ಅಮ್ಮನಿಗೆ ಮನೆ ಖರೀದಿಸಲು ಕೊಟ್ಟ ಅಮ್ಮನ ಮಗ ಯುವಿ, ವಿದಾಯ ಹೇಳುವಾಗಲೂ ಅಮ್ಮನನ್ನು ನೆನಪಿಸಿಕೊಂಡದ್ದು ಸುಮ್ಮನೇ ಅಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65